ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-3 Issue 4, Jan-Feb 2022, Pp.23-27.**
**©*IIMRD*, Mysuru**
IIMRD JOURNALS

**www.iimrd.com**

# ಚಾಮರಾಜನಗರ ಜಿಲ್ಲೆಯ ಶಾಸನ ಕವಿಗಳು, ಲಿಪಿಕಾರರು ಮತ್ತು ರೂವಾರಿಗಳು

**ಡಾ. ಮಹಾಂತೇಶ. ಮ. ಅಕ್ಕಿ***

*ಮುಖ್ಯಸ್ಥರು, ಇತಿಹಾಸ ವಿಭಾಗ, ಎಂ.ಎ.ಎಸ್.ಸಿ. ಮಹಾವಿದ್ಯಾಲಯ, ಹಂಸಭಾವಿ.

## ಸಾರಾಂಶ (Abstract)

*ಒಂದು ದೇಶದ ಇತಿಹಾಸವನ್ನು ಕಟ್ಟಿ ಕೊಡುವಲ್ಲಿ ಶಾಸನಗಳ ಪಾತ್ರ ಅತ್ಯಂತ ಪ್ರಮುಖವಾದುದು. ಶಾಸನಗಳು ಅಂದಿನ ಕಾಲದ ಅರಸರ ಆಳ್ವಿಕೆ, ಸೈನಿಕ ಮತ್ತು ಆಡಳಿತಾತ್ಮಕ ಸಾಧನೆಗಳು, ಧರ್ಮ, ಕಲೆ ಮತ್ತು ವಾಸ್ತುಶಿಲ್ಪದ ಬೆಳವಣಿಗೆ, ದಾನ–ದತ್ತಿಗಳ ಕುರಿತಾದ ಮಾಹಿತಿಯನ್ನು ಒದಗಿಸುತ್ತವೆ. ಆದರೆ ಕೆಲವು ಶಾಸನಗಳಲ್ಲಿ ಅವುಗಳನ್ನು ರಚಿಸಿದ, ಕಂಡರಿಸಿದ ಲಿಪಿಕಾರರ, ಸ್ಥಪತಿಗಳ ದಾಖಲೆಗಳೂ ಕಂಡುಬರುತ್ತವೆ. ಪ್ರಸ್ತುತ ಲೇಖನದಲ್ಲಿ ಚಾಮರಾಜನಗರ ಜಿಲ್ಲೆಯ ಶಾಸನದ ಕವಿಗಳು ಮತ್ತು ಲಿಪಿಕಾರರು ಹಾಗೂ ರೂವಾರಿಗಳನ್ನು ಪರಿಚಯಿಸುವುದೇ ಈ ಲೇಖನದ ಮುಖ್ಯ ಸಾರವಾಗಿದೆ.*

**ಮುಖ್ಯಪದಗಳು (Keywords):** *ಶಾಸನಗಳು, ಕವಿಗಳು, ಲಿಪಿಕಾರರು, ಸಂಸ್ಕೃತ, ರೂವಾರಿಗಳು.*

### ಪೀಠಿಕೆ

ಕರ್ನಾಟಕದ ದಕ್ಷಿಣ ಭಾಗದಲ್ಲಿರುವ ಚಾಮರಾಜನಗರವು ಕರ್ನಾಟಕದ ಒಂದು ಪ್ರಮುಖ ಜಿಲ್ಲೆಯಾಗಿದ್ದು, ಇದನ್ನು ಗಂಗ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಚೋಳ, ಹೊಯ್ಸಳ, ವಿಜಯನಗರ, ಉಮ್ಮತ್ತೂರು ಪಾಳೆಗಾರರು, ಕಳಲೆ, ಮೈಸೂರು ಒಡೆಯರು ಮುಂತಾದ ಅರಸು ಮನೆತನದವರು ಆಳ್ವಿಕೆ ಮಾಡಿದ್ದಾರೆ ಈ ಪ್ರದೇಶದಲ್ಲಿ ಇವರ ಆಳ್ವಿಕೆಯ ಕಾಲದಲ್ಲಿ ಹೊರಡಿಸಲ್ಪಟ್ಟ ಸುಮಾರು 240ಕ್ಕೂ ಹೆಚ್ಚು ಶಾಸನಗಳು ಇಂದು ನಮಗೆ ಕನ್ನಡ, ಸಂಸ್ಕೃತ, ತೆಲಗು ಭಾಷೆಗಳಲ್ಲಿ ಲಭ್ಯವಾಗಿವೆ. ಈ ಶಾಸನಗಳಿಂದ ನಾವು ಅವರ ಕಾಲದ ರಾಜಕೀಯ, ಆಡಳಿತಾತ್ಮಕ, ಸಾಮಾಜಿಕ, ಧಾರ್ಮಿಕ, ದೇವಾಲಯಗಳ ನಿರ್ಮಾಣ, ಜೀರ್ಣೋದ್ದಾರ, ಶೈಕ್ಷಣಿಕ ವಿಚಾರಗಳ ಜೊತೆಗೆ ದಾನ ದತ್ತಿಗಳನ್ನು ನೀಡಿದ ವಿಷಯಗಳನ್ನು ಸಹ ತಿಳಿದುಕೊಳ್ಳಬಹುದು.

ಸಾಹಿತ್ಯಿಕ ದೃಷ್ಟಿಯಿಂದ ನಾವು ಶಾಸನಗಳನ್ನು ಅವಲೋಕಿಸಿದಾಗ ಅವು ಹೆಚ್ಚಿನ ಮಹತ್ವವನ್ನು ಪಡೆದುಕೊಳ್ಳುತ್ತವೆ. ಏಕೆಂದರೆ ಶಾಸನಗಳಲ್ಲಿ ಕಂಡುಬರುವ ಶಾಸನ ಕವಿಗಳು ಕೇವಲ ಸಾಮಾಜಿಕ ಮತ್ತು ರಾಜಕೀಯ ದಾಖಲೆಗಳಾಗುತ್ತಿದ್ದ ಶಾಸನಗಳನ್ನು ತಮ್ಮ ಪ್ರತಿಭಾ ಸಾಮರ್ಥ್ಯದಿಂದ ಸಾಹಿತ್ಯವನ್ನಾಗಿಸಿದರು. ಗದ್ಯರೂಪದಲ್ಲಿದ್ದಂತಹ ಚರಿತ್ರೆಯ ವಿಷಯವನ್ನೂ ಸಹ ಇವರು ಕಾವ್ಯಾತ್ಮಕವಾಗಿ ರಚಿಸುವ ಪ್ರಯತ್ನ

*Please cite this article as: ಡಾ.ಮಹಾಂತೇಶ. ಮ.ಅಕ್ಕಿ. (2022). ಚಾಮರಾಜನಗರ ಜಿಲ್ಲೆಯ ಶಾಸನ ಕವಿಗಳು, ಲಿಪಿಕಾರರು ಮತ್ತು ರೂವಾರಿಗಳು ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(4). ಪು.ಸಂ. 23–27.*

ಮಾಡಿದರು. ಹೀಗೆ ಶಾಸನ ಕವಿಗಳು ತಮ್ಮ ಪಾಂಡಿತ್ಯ, ವಿದ್ವತ್ತಿನ ಬಲದಿಂದ ಶಾಸನಗಳನ್ನು ರಚಿಸಿದರೆ ರೂವಾರಿ ಅದನ್ನು ಕಂಡರಿಸಿದ್ದಾರೆ ಇಂತಹ ಅನೇಕ ಶಾಸನ ಕವಿಗಳನ್ನು, ಲಿಪಿಕಾರರನ್ನು, ಕವಿಗಳನ್ನು ನಾವು ಚಾಮರಾಜನಗರ ಜಿಲ್ಲೆಯ ಶಾಸನಗಳಲ್ಲಿ ಕಾಣಬಹುದು.ಸಾಮಾನ್ಯವಾಗಿ ಒಂದು ಶಾಸನ ನಿರ್ಮಾಣಗೊಳ್ಳಲು ಶಾಸನ ಕವಿ, ಲಿಪಿಕಾರ ಮುತ್ತು ರೂವಾರಿಗಳ ಪರಿಶ್ರಮವಿರುತ್ತದೆ. ಕವಿಯು ಶಾಸನ ಪಾಠವನ್ನು ರಚಿಸಿದರೆ ಅದನ್ನು ಕಲ್ಲ ಮೇಲೆ ಬರೆಯುವವನು ಲಿಪಿಕಾರ ಮುಂದೆ ರೂವಾರಿ ಅಥವಾ ಕಲ್ಲುಕುಟಿಗನು ಅದನ್ನು ಕಂಡರಿಸುತ್ತಿದ್ದನು. ಕೆಲವೊಮ್ಮೆ ಈ ಮೂರು ಕೆಲಸಗಳನ್ನು ಒಬ್ಬನೋ ಇಲ್ಲವೆ ಮೂವರು ಕೂಡಿ ಮಾಡಿರುವುದು ಕಂಡುಬರುತ್ತದೆ. ಕೆಲವು ಕಡೆ "ಶಾಸನ ಬರೆದಂ" "ಬರೆಪಂ" ಎಂಬಂಥ ಉಲ್ಲೇಖಗಳಿಂದ ಅವರು ಶಾಸನ ಕವಿಗಳೆಂದು ಗುರುತಿಸುವುದು ಕಷ್ಟ. ಇನ್ನು ಕೆಲವು ಕಡೆ ಅಪರೂಪವಾಗಿ ಹೆಮ್ಮೆಯಿಂದ ತಮ್ಮ ಹೆಸರನ್ನು ಸ್ಪಷ್ಟವಾಗಿ ಶಾಸನಕವಿಗಳು ಹೇಳಿಕೂಂಡಿದ್ದಾರೆ.

ಶಾಸನಗಳಲ್ಲಿ ಹೇಳಬೇಕಾದ ಎಲ್ಲಾ ವಿಷಯಗಳನ್ನು ಹೇಳಿದ ನಂತರ ಅಂದರೆ ಶಾಸನದ ಕೊನೆಯ ಭಾಗದಲ್ಲಿ ಶಾಸನ ಕವಿಗಳು ಲಿಪಿಕಾರರು ತಮ್ಮ ಹೆಸರನ್ನು ಹೇಳಿಕೊಳ್ಳುತ್ತಿದ್ದರು. ಕೆಲವೊಂದು ಶಾಸನಗಳಲ್ಲಿ ಆರಂಭದಲ್ಲಿಯೇ ಶಾಸನ ಕವಿಗಳ ಹೆಸರು ಇರುವುದು ಕಂಡುಬರುತ್ತದೆ. ಆದರೆ ಇಂತಹ ಶಾಸನಗಳು ಚಾಮರಾಜನಗರದಲ್ಲಿ ಕಂಡುಬರುವುದಿಲ್ಲ. ಚಾಮರಾರಜನಗರ ಜಿಲ್ಲೆಯ ಬಹುಪಾಲು ಶಾಸನಗಳಲ್ಲಿ ಶಾಸನ ಕವಿಗಳ, ರೂವಾರಿಗಳ, ಲಿಪಿಕಾರರ ಹೆಸರು ಕಂಡುಬರುವುದಿಲ್ಲ ಆದರೂ ಬೆರಳೆಣಿಕೆಯಷ್ಟು ಶಾಸನಗಳಲ್ಲಿ ಮಾತ್ರ ಕವಿಗಳು, ಲಿಪಿಕಾರರು, ರೂವಾರಿಗಳು ತಮ್ಮ ಹೆಸರನ್ನು ಹೇಳಿಕೊಂಡಿದ್ದಾರೆ ಇಂತಹ ಕವಿಗಳ, ಲಿಪಿಕಾರರ, ರೂವಾರಿಗಳ ಪರಿಚಯವನ್ನು ಮಾಡಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

**ಗೋಪಣ್ಣ**

ಹೊಮ್ಮದ ಮೂಲಸ್ಥಾನೇಶ್ವರದ ದೇವಾಲಯದ ಮೇಲೆ ನೆಟ್ಟಿರುವ ಕಲ್ಲಿನಲ್ಲಿ "ಅಕ್ಷಾರೆ ಗೋಪಂಣನ ಬರಹ" ಎಂದು ಮಾತ್ರವಿದೆ ಆದರೆ ಈ ಶಾಸನವು. ವೃತ್ತದಲ್ಲಿರುವದರಿಂದ ಇವನನ್ನು ಈ ಶಾಸನದ ಕರ್ತೃವೆಂದು ಪರಿಗಣಿಸಬಹುದು.

**ವಿದ್ಯಾನಂದೋಪಾಧ್ಯಾಯ**

ಮಲೆಯೂರು ಶಾಸನವು "ತಚ್ಛಿಷ್ಯ ವೃಷಭದಾಸವರ್ಣಿನಾ ಲಿಖಿತಂ॥ ಪದಮಿದಂ ವಿದ್ಯಾನಂದೋಪಾಧ್ಯಾಯೇನ ಕೃತಂ॥ ಎಂದು ಹೇಳಿದೆ. ಇದು ಸಂಸ್ಕೃತ ವೃತ್ತದಲ್ಲಿದ್ದು, ಈ ಶಾಸನದ ಪದ್ಯವು ವಿದ್ಯಾನಂದೋಪಾಧ್ಯಾಯ ಕೃತವೆಂದೂ ವೃಷಭದಾಸವರ್ಣಿಯು ಕಲ್ಲಿನ ಮೇಲೆ ಬರೆದವನಾಗಿರಬೇಕು. ಇಲ್ಲಿ ಲಿಖಿತಂ ಎಂಬ ಪದವು ಶಾಸನವನ್ನು ರಚಿಸಿದವನಿಗೆ ಅನ್ವಯಿಸದೆ ಕಲ್ಲಿನ ಮೇಲೆ ಬರೆದವನಿಗೆ ಅನ್ವಯಿಸುತ್ತದೆಂಬುದನ್ನು ಸ್ಪಷ್ಟವಾಗಿ ಕಾಣಬಹುದು. ಕನ್ನಡ ಕವಿಯೂ "ಕಾವ್ಯಸಾರ"ದ ಕರ್ತೃವೂ ಆದ ಅಭಿನವವಾದಿ ವಿದ್ಯಾನಂದನೂ ಇದೇ ಕಾಲಕ್ಕೆ ಸೇರಿದವನೆಂಬುದನ್ನು ಗಮನಿಸಬಹುದು (ಕ್ರಿ.ಶ.1533). ಪ್ರಸ್ತುತ ಶಾಸನದ ಕರ್ತೃವಾದ ವಿದ್ಯಾನಂದೋಪಾಧ್ಯಾಯನೇ ಈ ಅಭಿನವವಾದಿ ವಿದ್ಯಾನಂದನೆಂದು ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ.

**ತಿರುಮಲಾಯಾರ್ಯ**

ಚಾಮರಾಜನಗರದ ನಾರಾಯಣಸ್ವಾಮಿ ದೇವಸ್ಥಾನದ ಆಗಮಿಕರ ವಶದಲ್ಲಿದ್ದ ತಾಮ್ರ ಶಾಸನವು ಅಳಸಿಂಗರಾರ್ಯನ ಮಗ ತಿರುಮಲಯಾರ್ಯನ ರಚನೆಯಾಗಿದ್ದು, ಮೈಸೂರಿನ ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಪ್ರಖ್ಯಾತಕವಿ ಮತ್ತು "ಅಪ್ರತಿಮವೀರಚರಿತ" ಚಿಕ್ಕದೇವರಾಜ ವಿಜಯ ಮುಂತಾದ ಅನೇಕ ಸಾಹಿತ್ಯ ಕೃತಿಗಳ ಕರ್ತೃ ಇವನಾಗಿದ್ದಾನೆ.

**ಲಿಂಗಯ್ಯ**

ಹರದನಹಳ್ಳಿಯ ಈ ಶಾಸನವು ಸಂಸ್ಕೃತ ವೃತ್ತದಲ್ಲಿದ್ದು, "ಲಿಂಗಯ್ಯನ ಬರಹ" ಎಂದು ಹೇಳಿದೆ.

**ಕೃಷ್ಣದೀಕ್ಷಿತ**

ಹರದನಗಳ್ಳಿಯ ರಾಮಕೃಷ್ಣ ಜೋಯಿಸರಲ್ಲಿದ್ದ, ತಾಮ್ರ ಶಾಸನದಲ್ಲಿ "ಕಾಶ್ಯಪಃ ಸಾಮ ಗೋಧೀಮಾನ್ವಿದ್ವಾನ್ಶ್ರೀಕೃಷ್ಣದೀಕ್ಷಿತಃ। ತಾಮ್ರಶಾಸನಗಾನ್ ಶ್ಲೋಕಾನುಕ್ತ್ವಾಲಿಖ್ಯ ವಿರಾಜತೇ।" ಅಂದರೆ ಸೋಮಶಾಖೆಯ ಕಾಶ್ಯಪಗೋತ್ರದ ಕೃಷ್ಣದೀಕ್ಷಿತನಿಂದ ಇದು ರಚನೆಯಾಗಿದ್ದು, ಅವನನ್ನು ವಿದ್ವಾನ್ ಎಂದು ವರ್ಣಿಸಿದೆ.

**ರಾಯಪ್ಪ**

ಸಿಂಗನಲ್ಲೂರು ಶಾಸನವು "ನಾಡಸೇನಬೋವ ರಾಯ್ಪನ ಸ್ವಹಸ್ತದ ಬರಹಾನಾತ್ತಿಲ್ ಸೇನಭೋವ ಆ.........ಮಗನ್ ಆನ ಮದಪ್ಪನ್" ಎಂದಿದೆ. ಈ ಶಾಸನವು ಸೇನಭೋವನೂ ಆದ ಮಾದಪ್ಪನ ಎಲುತ್ತು(ಒಪ್ಪ?) ಎಂದು ನಿರ್ದೇಶಿಸಿರುವುದರಿಂದ ಈ ಸಂದರ್ಭದಲ್ಲಿ ಈ ಬರಹಗಾರರು ಅಧಿಕಾರಿಗಳೂ ಕರಣಿಕರೂ ಆಗಿರುವುದರಿಂದ ಶಾಸನದ ಕರಡು ಪ್ರತಿಯನ್ನು ಬರೆದವರೆಂದು ಪರಿಗಣಿಸುವುದು ಸೂಕ್ತ.

**ವರದಣ್ಣ**

ಈ ಶಾಸನವು ಅನಂತಪ್ಪನ ಮಗನಾದ ವರದಣ್ಣ(ನ್ನ)ನನ್ನು ಹೆಸರಿಸುತ್ತದೆ. ಇವನು ಈ ಶಾಸನದ ಕರಡನ್ನು ಬರೆದವನಾಗಿರಬಹುದು.

**ಸಂಕಣ**

ಮೂಡಲಗ್ರಹಾರ ಶಾಸನವಯ "ಸೇನಭೋವ ಸಂಕಣನ ಬರಹ ಸಿದ್ದನ ಬರಹ" ಎಂದು ಹೇಳಿದೆ. ಇಲ್ಲಿ ನಾವು ಕರಡು ಪ್ರತಿಯನ್ನು ಸಿದ್ದಪಡಿಸಿದವನು ಸಂಕಣ ಕಂಡರಿಸಿದವನು ಸಿದ್ದನೆಂದು ಊಹಿಸಬಹುದಾಗಿದೆ.

**ರಂಗರಾಜಯ್ಯ**

ಈ ಶಾಸನವಯ ರಂಗರಾಜಯ್ಯನ ಬರಹ ಎಂಬ ಹೇಳಿಕೆಯೊಂದಿಗೆ ಮುಕ್ತಾಯವಾಗುತ್ತದೆ, ಅಲ್ಲದೆ ಈ ಶಾಸನದಲ್ಲಿ ಬರು ದಾನಿಯೂ ಕೂಡ ರಂಗರಾಜಯ್ಯನೇ ಆಗಿದ್ದಾನೆ.

**ವಟ್ಟಾಚಾರಿ**

ಬಾಗಳಿ ಶಾಸನವು "ಈ ಶಾಸನಂ ಬರೆದೋ ನಿರ್ಗ್ಗನ್ದನ ಸಿಲ್ಪಕ ವಟ್ಟಾಚಾರಿ ಮನ್ಗಳ ಮಹಾಶ್ರೀ" ಎಂದಿದೆ. ಇದರ ಪ್ರಕಾರ ಶಿಲ್ಪಕ ವಟ್ಟಾಚಾರಿಯು ಇದನ್ನು ಬರೆದವನು ಆದರೆ ಶಿಲ್ಪಕನೆಂದು ಇಲ್ಲಿ ವರ್ಣಿತನಾಗಿರುವದರಿಂದ ಈತನು ಇದನ್ನು ಕಂಡರಿಸಿದವನೆಂದು ಎಣಿಸಬಹುದಾಗಿದೆ.

**ಸಭಾಪತಿ**

ಗುಂಡ್ಲುಪೇಟೆ, ತ್ರಿಯಂಬಕಪುರ ಶಾಸನಗಳ ಕರ್ತೃ ಸಭಾಪತಿ. ಈತ ಕೃಷ್ಣದೇವರಾಯನ ಕಾಲದ ಕವಿ ಈ ಎರಡೂ ಶಾಸನಗಳನ್ನು ಕಂಡರಿಸಿದವನು ವೀರಣಾಚಾರ್ಯ. ಈ ವೀರಣಾಚಾರ್ಯ ಮಲ್ಲಣಾಚಾರ್ಯನ ಮಗ ಎಂದು ತಿಳಿದುಬರುತ್ತದೆ.

**ದುಕ್ಕನ್**

ಈ ಶಾಸನವು ದುಕ್ಕನ್ ಎಂಬುವವನ ಬರಹವಾಗಿದೆ. ಇವನು ಇಡೈಕುಂದುನಾಡಿನ ಕರಣಿಕ.

**ಶ್ರೀ ಪಾದಾಳ್ವಾನ್**

ಈ ಶಾಸನದಲ್ಲಿ ಶ್ರೀ ಪಾದಾಳ್ವಾನ್ ಎಂಬುವವನ ಬರಹವೆಂದು ಉಲ್ಲೇಖವಿದೆ.

**ದೊಡ್ಡೋಜ**

ಎಡೂರು ಶಾಸನದಲ್ಲಿ "ಮಲ್ಲೋಜನ ಮಗನು ದೊಡ್ಡೋಜನ ಬರಹ" ಎಂದಿದೆ.

**ವಿಶ್ವಕರ್ಮಾಚಾರಿ**

ಕೆರೆಹಳ್ಳಿ ಶಾಸನದಲ್ಲಿ "ವಿಸ್ವಕರ್ಮ ಶಾಸನಂ ಲಿಖಿತಂ" ಎಂದಿದೆ.

**ನಾರಣಾಚಾರಿ**

ಹಳೇ ಆಲೂರು ಶಾಸನವು "ದೇಶಿಯಾಚಾರಿ ಮಗನ್ ನಾರಾಣಾಚಾರಿ"ಯನ್ನು ಉಲ್ಲೇಖಿಸಿದೆ.

**ಧರಾ**

ಅಂಚವಾಡಿ ಶಾಸನವು "ಇದ ಬರೆದಂ ಗವರೆಸೆಟ್ಟಯ್ಯ ಮಗ ಧರಂ" ಎಂದು ಹೇಳಿದೆ.

**ಸೋಮರಸ**

ಕಾಳನಹುಂಡಿ ಶಾಸನವು "ಮಾಲ್ಲನೂರ ಸೋಮರಸನ ಬರಹ" ಎಂದು ಉಲ್ಲೇಖಿಸಿದೆ.

**ಚೋವಿಸ**

ಲೊಕ್ಕೆರೆ ಶಾಸನವಯ "ಅಪ್ಪಾಜಿ ಚೋವಿಸನ ಬರಪ" ಎಂದಿದೆ.

**ಮಾಣಿಕ್ಕಾಚಾುರಿ**

ಕೆಲಸೂರು ಶಾಸನವು "ರಾಜಾಚಾರಿ ಮಗನ್ ಮಾಣಿಕ್ಕಾಚಾರಿ" ಎಂದು ಹೇಳಿದೆ.

**ಸೋಮರಾಯ**

"ಸೋಮರಾಯ ಒಡೆಯರ ಬರಹ" ಎಂಬು ತ್ರಿಯಂಬಕಪುರ ಶಾಸನದಲ್ಲಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ, ಚಾಮರಾಜನಗರ ಜಿಲ್ಲೆಯ ಶಾಸನಗಳನ್ನು ಅವಲೋಕಿಸಿದಾಗ ಮೇಲೆ ತಿಳಿಸಿದ ಈ ಎಲ್ಲ ಶಾಸನ ಕವಿಗಳು, ರೂವಾರಿಗಳು, ಲಿಪಿಕಾರರು ಕಂಡುಬರುತ್ತಿದ್ದು, ಇವರು ರಚಿಸಿದ ಶಾಸನಗಳು ಗದ್ಯ, ಪದ್ಯ ರೂಪದಲ್ಲಿದ್ದು ಸಾಹಿತ್ಯಿಕ ದೃಷ್ಟಿಯಿಂದ ಅತ್ಯಂತ ಮಹತ್ವವುಳ್ಳದ್ದಾಗಿವೆ ಎಂದು ಹೇಳಬಹುದು.

**ಪರಾಮರ್ಶನ ಗ್ರಂಥಗಳು**


- ಎಪಿಗ್ರಾಫಿಯ ಕರ್ನಾಟಿಕ. (1974). ಸಂಪುಟ.3. ಕನ್ನಡ ಅಧ್ಯಯನ ಸಂಸ್ಥೆ, ಸಂಪುಟ.3, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಎಪಿಗ್ರಾಫಿಯ ಕರ್ನಾಟಿಕ. (1975). ಸಂಪುಟ.4. ಕನ್ನಡ ಅಧ್ಯಯನ ಸಂಸ್ಥೆ, ಸಂಪುಟ.4, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ನರಸಿಂಹಾಚಾರ್ಯ ಆರ್. (1974). ಕರ್ನಾಟಕ ಕವಿಚರಿತೆ, ಸಂ.1–2, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ನರಸಿಂಹಾಚಾರ್ಯ ಆರ್. (1975). ಶಾಸನ ಪದ್ಯ ಮಂಜರಿ, ಬೆಂಗಳೂರು.
- ಮೇವುಂಡಿ ಮಲ್ಲಾರಿ. (1974). ಕನ್ನಡ ಶಾಸನ ಕವಿಗಳು, ಸಮಾಜ ಪುಸ್ತಕಾಲಯ, ಧಾರವಾಡ.